# ಶ್ರೀರಾಮಕೃಷ್ಣ-ವಿವೇಕಾನಂದರು

ಮೂಲ : ನೇತಾಜಿ ಸುಭಾಷ್ ಚಂದ್ರ ಬೋಸ್

ಕನ್ನಡಕ್ಕೆ : ಡಾ. ಸಿ.ಪಿ. ಕೃಷ್ಣಕುಮಾರ್

*ಶ್ರೀರಾಮಕೃಷ್ಣ ಮತ್ತು ವಿವೇಕಾನಂದರನ್ನು ಕುರಿತಾದ ಈ ಸುಂದರ ಬರಹವನ್ನು ಕನ್ನಡಕ್ಕೆ ಅನುವಾದಿಸಿರುವ ಶ್ರೀ ಸಿ.ಪಿ.ಕೆ ಅವರು ಹೆಸರಾಂತ ಸಾಹಿತಿಗಳೂ ಶ್ರೀರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುತ್ತಾರೆ.*

೧೯ನೆಯ ಶತಮಾನದ ಎಂಟನೆಯ ದಶಕದಲ್ಲಿ ಇಬ್ಬರು ಪ್ರಮುಖ ಧಾರ್ಮಿಕ ವ್ಯಕ್ತಿಗಳು ಸಾರ್ವಜನಿಕರ ಮುಂದೆ ಕಾಣಿಸಿಕೊಂಡರು; ನವ ಜಾಗೃತಿಯೊಂದರ ಭವಿಷ್ಯಗತಿಯ ಮೇಲೆ ಅದ್ಭುತ ಪ್ರಭಾವ ಬೀರುವ ಅದೃಷ್ಟ ಅವರದಾಗಿತ್ತು. ಅವರೆಂದರೆ, ರಾಮಕೃಷ್ಣ ಪರಮಹಂಸರು ಮತ್ತು ಅವರ ಶಿಷ್ಯ ಸ್ವಾಮಿ ವಿವೇಕಾನಂದರು. ರಾಮಕೃಷ್ಣರು ಎಲ್ಲ ಧರ್ಮಗಳ ಐಕ್ಯದ ಸಂದೇಶವನ್ನು ಬೋಧಿಸಿದರು ಮತ್ತು ಅಂತರ್ ಧಾರ್ಮಿಕ ಘರ್ಷಣೆಯ ಅಂತ್ಯಕ್ಕಾಗಿ ಒತ್ತಾಯಿಸಿದರು. ತಮ್ಮ ಅವಸಾನಕ್ಕೆ ಮುನ್ನ ಅವರು ತಮ್ಮ ಧಾರ್ಮಿಕ ಬೋಧನೆಗಳನ್ನು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಹರಡುವ ಮತ್ತು ತಮ್ಮ ದೇಶಬಾಂಧವರಲ್ಲಿ ಎಚ್ಚರವನ್ನುಂಟು ಮಾಡುವ ಕಾರ್ಯವನ್ನು ತಮ್ಮ ಶಿಷ್ಯರಿಗೆ ವಿಧಿಸಿದರು.

ಆದ್ದರಿಂದ, ಸ್ವಾಮಿ ವಿವೇಕಾನಂದರು ಅತ್ಯಂತ ಪರಿಶುದ್ಧ ರೂಪದಲ್ಲಿ ಹಿಂದೂಧರ್ಮವನ್ನು ಬದುಕಲು ಮತ್ತು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ—ವಿಶೇಷವಾಗಿ ಅಮೆರಿಕದಲ್ಲಿ—ಬೋಧಿಸಲು ರಾಮಕೃಷ್ಣ  ಮಹಾಸಂಘವನ್ನು ಸ್ಥಾಪಿಸಿದರು; ಆರೋಗ್ಯಪೂರ್ಣ ರಾಷ್ಟ್ರೀಯತೆಯ  ಪ್ರತಿಯೊಂದು ರೂಪವನ್ನೂ ಸ್ಫೂರ್ತಿಗೊಳಿಸುವಲ್ಲಿ  ಕ್ರಿಯಾಶೀಲಪಾತ್ರ ವಹಿಸಿದರು. ಭಾರತದ ಪ್ರಾಚೀನತೆಯ ಬಗೆಗೆ ಹೆಮ್ಮೆಯ ಭಾವನೆಯನ್ನೂ ಭವಿಷ್ಯದ ಬಗೆಗೆ ಶ್ರದ್ಧೆಯನ್ನೂ ಆತ್ಮ ಪ್ರತ್ಯಯ ಆತ್ಮಗೌರವಗಳನ್ನೂ ಅವರು ನವಜನಾಂಗದಲ್ಲಿ ತುಂಬಲು ಪ್ರಯತ್ನಿಸಿದರು.

ಸ್ವಾಮೀಜಿ ಯಾವುದೇ ರಾಜಕೀಯ ಸಂದೇಶವನ್ನು ನೀಡದಿದ್ದರೂ, ಅವರ ವ್ಯಕ್ತಿತ್ವದ ಅಥವಾ  ಬರವಣಿಗೆಯ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರೂ ದೇಶಭಕ್ತಿಯ ಮನೋಧರ್ಮವನ್ನು ಮತ್ತು ರಾಜಕೀಯ ಪ್ರಜ್ಞೆಯನ್ನು ಬೆಳಸಿಕೊಂಡರು. ಕಡೆಯ ಪಕ್ಷ ಬಂಗಾಳಕ್ಕೆ ಸಂಬಂಧಿಸಿದಂತೆ, ಆಧುನಿಕ ರಾಷ್ಟ್ರೀಯ ಚಳವಳಿಯ ಆಧ್ಯಾತ್ಮಿಕ ಪಿತನೆಂದು ಸ್ವಾಮಿ ವಿವೇಕಾನಂದರನ್ನು ಪರಿಗಣಿಸಬಹುದು.



*ರಾಮಕೃಷ್ಣರು ಎಲ್ಲ ಧರ್ಮಗಳ ಐಕ್ಯದ ಸಂದೇಶವನ್ನು ಬೋಧಿಸಿದರು ಮತ್ತು ಅಂತರ್ ಧಾರ್ಮಿಕ ಘರ್ಷಣೆಯ ಅಂತ್ಯಕ್ಕಾಗಿ ಒತ್ತಾಯಿಸಿದರು.*

ನಾನು  ವಿವೇಕಾನಂದರನ್ನು ಕುರಿತು ರೋಮಾಂಚನಗೊಳ್ಳದೆ ಬರೆಯಲಾರೆ. ಎಲ್ಲೋ ಕೆಲವರು ಮಾತ್ರ— ಅವರಿಗೆ ಆಪ್ತರಾಗುವ ಅವಕಾಶವಿದ್ದವರಲ್ಲಿ ಕೂಡ—ಅವರನ್ನು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಅವರ ವ್ಯಕ್ತಿತ್ವ ಶ್ರೀಮಂತ, ಗಹನ ಮತ್ತು ಸಂಕೀರ್ಣವಾಗಿತ್ತು; ತಮ್ಮ ದೇಶಬಾಂಧವರ, ಅದರಲ್ಲೂ ಬಂಗಾಳಿಗಳ ಮೇಲೆ ಅವರು ಬೀರಿದ ಅದ್ಭುತ ಪ್ರಭಾವಕ್ಕೆ ಕಾರಣವಾದುದು, ಅವರ ಉಪದೇಶ ಮತ್ತು ಬರಹಗಳಿಂದ ಬೇರೆಯಾಗಿ, ಈ ವ್ಯಕ್ತಿತ್ವವೇ. ಬಂಗಾಳಿಗಳನ್ನು ಪ್ರಾಯಶಃ ಅನನ್ಯವಾಗಿ ತಟ್ಟಿದ್ದು ಈ ಪೌರುಷದ ಪ್ರಕಾರವೇ. ತಮ್ಮ ತ್ಯಾಗದಲ್ಲಿ ಮುಂದಾಲೋಚನೆಯಿಲ್ಲದವರಾಗಿ, ಚಟುವಟಿಕೆಯಲ್ಲಿ ಅವಿರಾಮಶೀಲರಾಗಿ, ಪ್ರೀತಿಯಲ್ಲಿ ಅಸೀಮರಾಗಿ, ವಿವೇಕದಲ್ಲಿ ಗಾಢತೆ ಮತ್ತು ಬಹುಮುಖತೆಯುಳ್ಳವರಾಗಿ, ಭಾವಸಮೃದ್ಧಿಯುಳ್ಳವರಾಗಿ, ಆಕ್ರಮಣದಲ್ಲಿ ಕರುಣಾರಹಿತರಾಗಿ, ಆದರೂ ಮಗುವಿನಂತೆ ಸರಳರಾಗಿ ಅವರು ನಮ್ಮೀ ಜಗತ್ತಿನಲ್ಲೊಂದು ವಿರಳ ವ್ಯಕ್ತಿತ್ವವಾಗಿದ್ದರು.

ಸ್ವಾಮೀಜಿ ತುಂಬು ನೆತ್ತರಿನ ಗಂಡು ವ್ಯಕ್ತಿಯಾಗಿದ್ದರು: ನೂರಕ್ಕೆ ನೂರರಷ್ಟು ಹೋರಾಟಗಾರರಾಗಿದ್ದರು. ತತ್ಪರಿಣಾಮವಾಗಿ, ಶಕ್ತಿಪೂಜಕರಾಗಿದ್ದು, ತಮ್ಮ ದೇಶಬಾಂಧವರ ಉದ್ಧಾರಕ್ಕಾಗಿ ವೇದಾಂತಕ್ಕೊಂದು ವ್ಯಾವಹಾರಿಕ ವ್ಯಾಖ್ಯಾನವನ್ನಿತ್ತರು. ನಾನು ಗಂಟೆಗಟ್ಟಲೆ ಹೇಳುತ್ತ ಹೋಗಬಲ್ಲೆ; ಆದರೂ ಆ ಮಹಾಪುರುಷನಿಗೆ ಅತ್ಯಲ್ಪ ನ್ಯಾಯ ಸಲ್ಲಿಸುವುದರಲ್ಲಿಯೂ ವಿಫಲ



ಆಧುನಿಕ ರಾಷ್ಟ್ರೀಯ ಚಳವಳಿಯ ಆಧ್ಯಾತ್ಮಿಕ ಪಿತನೆಂದು ಸ್ವಾಮಿ ವಿವೇಕಾನಂದರನ್ನು ಪರಿಗಣಿಸಬಹುದು.

—ನೇತಾಜಿ ಸುಭಾಷ್ ಚಂದ್ರ ಬೋಸ್.

ನಾಗುತ್ತೇನೆ. ಅವರಲ್ಲಿ ಅಷ್ಟು ಮಹತ್ತು, ಅಷ್ಟು ಅಗಾಧತೆ, ಅಷ್ಟು ಸಂಕೀರ್ಣತೆ. ಸತ್ಯದೊಡನೆ ನೇರ ಸಂಪರ್ಕವುಳ್ಳ, ಅತ್ಯುನ್ನತ ಹಂತದ ಯೋಗಿ, ತಮ್ಮ ರಾಷ್ಟ್ರದ ಮತ್ತು ಮನುಕುಲದ ನೈತಿಕ ಮತ್ತು ಆಧ್ಯಾತ್ಮಿಕ ಉದ್ಧಾರಕ್ಕಾಗಿ ತಮ್ಮ ಇಡೀ ಬದುಕನ್ನು ಮೀಸಲಿಟ್ಟವರು—ಹೀಗೆ ಅವರನ್ನು ನಾನು ವರ್ಣಿಸುತ್ತೇನೆ. ಅವರು ಬದುಕಿದ್ದರೆ, ನಾನು ಅವರ ಪದತಲದಲ್ಲಿರುತ್ತಿದ್ದೆ. ಆಧುನಿಕ ಬಂಗಾಳ ಅವರ ಸೃಷ್ಟಿ—ನನ್ನ ಹೇಳಿಕೆ ತಪ್ಪಲ್ಲವಾದರೆ.

ಶ್ರೀರಾಮಕೃಷ್ಣರಿಗೆ ಮತ್ತು ಸ್ವಾಮಿ ವಿವೇಕಾನಂದರಿಗೆ ನನ್ನ ಋಣವನ್ನು ಮಾತುಗಳಲ್ಲಿ ನಾನು ಹೇಗೆ ಅಭಿವ್ಯಕ್ತಿಸಲಿ? ನನ್ನ ಬದುಕು ಮೊದಲು ಜಾಗೃತವಾದದ್ದು ಅವರ ಪವಿತ್ರ ಪ್ರಭಾವದಲ್ಲಿ. ರಾಮಕೃಷ್ಣ, ವಿವೇಕಾನಂದರನ್ನು ಒಂದೇ ಅವಿಭಾಜ್ಯ ವ್ಯಕ್ತಿತ್ವದ ಎರಡು ಮುಖಗಳೆಂದು ನಾನೂ ಸೋದರಿ ನಿವೇದಿತಾಳಂತೆ ಪರಿಗಣಿಸುತ್ತೇನೆ. ಸ್ವಾಮೀಜಿ ಇಂದು ಬದುಕಿದ್ದಿದ್ದರೆ, ನನ್ನ ಗುರುವಾಗಿರುತ್ತಿದ್ದರು; ಎಂದರೆ ನನ್ನ ಆಚಾರ್ಯನೆಂದು ಅವರನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೂ ನಾನು ಬದುಕಿರುವವರೆಗೆ, ರಾಮಕೃಷ್ಣ-ವಿವೇಕಾನಂದರಿಗೆ ನಿಷ್ಠನೂ ಸಮರ್ಪಿತನೂ ಆಗಿರುತ್ತೇನೆಂದು ಹೇಳುವ ಅಗತ್ಯವಿಲ್ಲ.

ಸ್ವಾಮಿ ವಿವೇಕಾನಂದರ ಬಹುಮುಖ ಪ್ರತಿಭೆಯನ್ನು ವಿವರಿಸುವುದು ಬಹಳ ಕಷ್ಟ. ತಮ್ಮ ಕೃತಿಗಳಿಂದ ಮತ್ತು ಭಾಷಣಗಳಿಂದ ಸ್ವಾಮೀಜಿ ನಮ್ಮ ಕಾಲದ ವಿದ್ಯಾರ್ಥಿಗಳ ಮೇಲೆ ಮೂಡಿಸಿದ ಪ್ರಭಾವಮುದ್ರೆ ದೇಶದ ಮತ್ತಾವ ರಾಜಕಾರಣಿಯದಕ್ಕಿಂತಲೂ ಬಹಳ ಮಿಗಿಲಾಗಿತ್ತು. ಅವರ ಆಶೋತ್ತರಗಳನ್ನು ಸ್ವಾಮೀಜಿ ಪೂರ್ಣವಾಗಿ ಅಭಿವ್ಯಕ್ತಿಸಿದರು. ಆದರೆ ಸ್ವಾಮೀಜಿಯವರನ್ನು ಶ್ರೀಪರಮಹಂಸದೇವರೊಡನೆ ಅಧ್ಯಯನ ಮಾಡದಿದ್ದರೆ ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಇಂದಿನ ಸ್ವಾತಂತ್ರ್ಯ ಚಳುವಳಿಯ ತಳಹದಿಯ ಮೂಲ ಸ್ವಾಮೀಜಿಯ ಸಂದೇಶಕ್ಕೆ ಋಣಿಯಾಗಿದೆ. ಭಾರತ ಸ್ವತಂತ್ರವಾಗಬೇಕಾದರೆ—ಅದು ವಿಶೇಷವಾಗಿ ಹಿಂದೂಧರ್ಮದ ಅಥವಾ ಇಸ್ಲಾಂ ಧರ್ಮದ ನಾಡಾಗುವುದು ಸಾಧ್ಯವಿಲ್ಲ—ಅದು ರಾಷ್ಟ್ರೀಯತೆಯ ಆದರ್ಶದಿಂದ ಸ್ಫೂರ್ತಿಗೊಂಡು, ವಿಭಿನ್ನ ಧಾರ್ಮಿಕ ಸಮಾಜಗಳ ಒಂದು ಏಕೀಕೃತ ನಾಡಾಗಬೇಕು. ಅದಕ್ಕಾಗಿ, ಭಾರತೀಯರು ಧರ್ಮಗಳ ಸಾಮರಸ್ಯದ ಸಂದೇಶವನ್ನು ತುಂಬು ಹೃದಯದಿಂದ ಒಪ್ಪಿಕೊಳ್ಳಬೇಕು; ಅದು ರಾಮಕೃಷ್ಣ-ವಿವೇಕಾನಂದರ ಸಂದೇಶ.

ಪ್ರಾಚ್ಯ-ಪಾಶ್ಚಾತ್ಯಗಳನ್ನು, ಧರ್ಮ-ಅರ್ವಾಚೀನಗಳನ್ನು ಸ್ವಾಮೀಜಿ ಸಮನ್ವಯಗೊಳಿಸಿದರು. ಆದ್ದರಿಂದಲೇ ಅವರು ಮಹಾಪುರುಷರು. ಅವರ ಬೋಧನೆಗಳಿಂದ ನಮ್ಮ ದೇಶಬಾಂಧವರು ಅಭೂತಪೂರ್ವ ಆತ್ಮಗೌರವ, ಆತ್ಮಪ್ರತ್ಯಯ ಹಾಗೂ ಆತ್ಮಪ್ರತಿಷ್ಠಾಪನೆಯನ್ನು ಪಡೆದರು. ತಮ್ಮ ಬದುಕಿನ ಉದ್ಯಮದಲ್ಲಿ ರಾಮಕೃಷ್ಣರು ಸಾಧಿಸಿದ ಸರ್ವಧರ್ಮಸಮನ್ವಯ ಸ್ವಾಮೀಜಿಯ ಜೀವನದ ಪಲ್ಲವಿಯಾಗಿತ್ತು. ಮತ್ತು, ಈ ಭಾವನೆ ಭವಿಷ್ಯತ್ ಭಾರತದ ರಾಷ್ಟ್ರೀಯತೆಯ ಬುನಾದಿಯಾಗಿದೆ. ಸರ್ವಮತ ಸಾಮರಸ್ಯದ ಮತ್ತು ಸರ್ವಪಂಥ ಸಹಿಷ್ಣುತೆಯ ಈ ಪರಿಕಲ್ಪನೆಯಿಲ್ಲದಿದ್ದರೆ, ವೈವಿಧ್ಯಪೂರ್ಣವಾದ ನಮ್ಮ ಈ ದೇಶದಲ್ಲಿ ರಾಷ್ಟ್ರೀಯ ಮನೋಧರ್ಮ ರೂಪುಗೊಳ್ಳುವುದು ಸಾಧ್ಯವಿರಲಿಲ್ಲ.

ರಾಮಮೋಹನರಾಯ್ ಕಾಲದಿಂದಲೂ ಸ್ವಾತಂತ್ರ್ಯದ ಅಭೀಪ್ಸೆ ಹಲವು ಚಳವಳಿಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಈ ಅಭೀಪ್ಸೆ ಹತ್ತೊಂಬತ್ತನೆಯ ಶತಮಾನದಲ್ಲಿ ಆಲೋಚನೆಯ ಹಾಗೂ ಸಾಮಾಜಿಕ ಸುಧಾರಣೆಗಳ ಪ್ರಾಂತದಲ್ಲಿ ಕಂಡುಬಂತು; ಆದರೆ ರಾಜಕೀಯ ವಲಯದಲ್ಲಿ ಎಂದೂ ವ್ಯಕ್ತವಾಗಲಿಲ್ಲ. ಏಕೆಂದರೆ, ಭಾರತದ ಜನ ಇನ್ನೂ ಪರಾಧೀನತೆಯ ಮಂಪರಿನಲ್ಲಿ ಮುಳುಗಿದ್ದರು ಮತ್ತು ಬ್ರಿಟಿಷರು ಭಾರತವನ್ನು ಜಯಿಸಿದ್ದು ಭಗವದಿಚ್ಛೆಯ ಒಂದು ಕ್ರಿಯೆಯೆಂದು ಭಾವಿಸಿದ್ದರು. ಸಂಪೂರ್ಣ ಸ್ವಾತಂತ್ರ್ಯದ ಭಾವನೆ ಹತ್ತೊಂಬತ್ತನೆಯ ಶತಮಾನದ ಕೊನೆಕೊನೆಗೆ ರಾಮಕೃಷ್ಣ-ವಿವೇಕಾನಂದರಲ್ಲಿ ಮಾತ್ರ ವ್ಯಕ್ತವಾಗುತ್ತದೆ. "ಸ್ವಾತಂತ್ರ್ಯವೆ ಆತ್ಮದ ಹಾಡು"—ಇದು ಸ್ವಾಮೀಜಿ ಹೃದಯಾಂತರಾಳದಿಂದ ಹೊಮ್ಮಿ ಇಡೀ ದೇಶವನ್ನು ಸೆರೆಹಿಡಿದು ಬಹುಮಟ್ಟಿಗೆ ಮರುಳುಮಾಡಿದ ಸಂದೇಶ. ಈ ಸತ್ಯ ಅವರ ಕೃತಿಗಳಲ್ಲಿ, ಜೀವನದಲ್ಲಿ, ಸಂಭಾಷಣೆಗಳಲ್ಲಿ ಹಾಗೂ ಭಾಷಣಗಳಲ್ಲಿ ಅಂತರ್ಗತವಾಗಿತ್ತು.

*ಸ್ವಾಮಿ ವಿವೇಕಾನಂದರು ಒಂದು ಕಡೆ ಮಾನವನಿಗೆ ಎಲ್ಲ ಸಂಕೋಲೆಗಳನ್ನು ಕಳಚಿಕೊಂಡು ನಿಜವಾದ ಮಾನವನಾಗಿರಲು ಕರೆಕೊಟ್ಟರು ಮತ್ತು ಇನ್ನೊಂದು ಕಡೆ ಧರ್ಮಸಾಮರಸ್ಯದ ಸಂದೇಶವನ್ನು ಬೋಧಿಸುವುದರ ಮೂಲಕ ಭಾರತದಲ್ಲಿ ನಿಜವಾದ ರಾಷ್ಟ್ರೀಯತೆಯ ತಳಹದಿಯನ್ನು ಹಾಕಿದರು.* ❖

ಈ ಲೇಖನದ ಪ್ರಾಯೋಜಕರು : ಎಸ್ಕೆ ಇಂಡಸ್ಟ್ರೀಸ್,ನಂ.೪೪೪,೪೪೫, ೧೨ ಕ್ರಾಸ್, ೪ನೇ ಹಂತ, ಪೀಣ್ಯ, ಬೆಂಗಳೂರು, ೫೬೦೦೫೮
ಹೀಟ್ ಎಕ್ಸ್‌ಚೇಂಜರುಗಳ ತಯಾರಕರು : ದಕ್ಷತೆ, ಉಳಿತಾಯ ಮತ್ತು ಶೀಘ್ರ ರವಾನೆ